ಕ್ರಮ ತೆಗೆದುಕೊಳ್ಳಲಾಗುವುದು.

ಸಿಂಧನೂರು ತಾಲ್ಲೂಕಿನ ಪೋಲೀಸ್ ಠಾಣೆಗಳಲ್ಲಿ ಸಿಬ್ಬಂದಿ ಕೊರತೆ.

164 (143)

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸಿಂಧನೂರು ತಾಲ್ಲೂಕಿನಲ್ಲಿರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ಈ ಠಾಣೆಗಳಲ್ಲಿ ಸಿಬ್ಬಂದಿ ವರ್ಗದವರ ಕೊರತೆ ಇದೆಯೇ?

ಆ. ಸಿಂಧನೂರು ತಾಲ್ಲೂಕು ಗ್ರಾಮೀಣ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ. ಸಿಂಧನೂರು ತಾಲ್ಲೂಕಿನಲ್ಲಿ ಮೂರು ಪೊಲೀಸ್ ಠಾಣೆಗಳು ಇವೆ, ಸಿಬ್ಬಂದಿ ಕೊರತೆ ಇಲ್ಲ.

ಆ. ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಅನಧಿಕೃತ ಮದ್ಯ ಮಾರಾಟ

166 (182)

ಶ್ರೀ ಹೊನ್ನಳ್ಳಿ ಜಬ್ಬರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು? (ಪತ್ತೆ ಹಚ್ಚಿದ ಪ್ರಕರಣಗಳ ವಿವರ ನೀಡುವುದು)

2) ಈ ಅನಧಿಕೃತ ಮದ್ಯ ಮಾರಾಟದಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

1) ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಲ್ಲಿ ಅನಧಿಕೃತ ಮದ್ಯ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದನ್ನು ತಡೆಗಟ್ಟಲು ಇಲಾಖೆಯು ಜುಲೈ 99 ರಿಂದ ಮಾರ್ಚ್ 15, 2000ದ ವರೆಗೆ 286 ಪ್ರಕರಣಗಳನ್ನು ಪತ್ತೆ ಹಚ್ಚಿ, 4 ಮೊಕದ್ದಮೆಗಳನ್ನು ದಾಖಲಿಸಿ ಈ ಪ್ರಕರಣಗಳಲ್ಲಿ ಒಟ್ಟು 54,796 ಲೀಟರ್ ಮದ್ಯವನ್ನು ಜಪ್ತು ಮಾಡಿರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ಸೂಚಿಸಲಾಗಿದೆ.)

2) ಈ ಅನಧಿಕೃತ ಮದ್ಯ ಮಾರಾಟದಿಂದ ಸರ್ಕಾರಕ್ಕೆ ಆಗುವ ನಷ್ಟವನ್ನು ನಿಖರವಾಗಿ ಹೇಳಲು ಬರುವುದಿಲ್ಲ.

ಅನುಬಂಧ - I

1)	ಇಲ್ಲಿಯವರೆಗೆ ಇಲಾಖೆಯಿಂದ ದಾಖಲು ಮಾಡಿದ ಪ್ರಕರಣಗಳು	ಸ್ಪಿರಿಟ್ ಸಾಗಾಣಿಕೆ ಬಗ್ಗೆ ಜುಲೈ-99 ರಿಂದ ಮಾರ್ಚ್ 15,2000ದ ವರೆಗೆ ಒಟ್ಟು (4) ಪ್ರಕರಣಗಳನ್ನು ದಾಖಲು ಮಾಡಲಾಗಿದೆ.
2)	ವಶಪಡಿಸಿಕೊಂಡಿರುವ ವಾಹನಗಳ ಸಂಖ್ಯೆ	ವಾಹನಗಳ ಸಂಖ್ಯೆ: 4 1) ಎಂಹೆಚ್: 18: ಡಿ-7643 2) ಟಿಎನ್: 57: ಸಿ-1287 3) ಜಿಜೆ: 19: ಟಿ -575 4) ಟಿಎನ್: 57 ಕೆ-9129
3)	ಈ ಪ್ರಕರಣದಲ್ಲಿ ಭಾಗಿಯಾಗಿರುವವರ ಹೆಸರು ಮತ್ತು ಅವರು ಉಪಯೋಗಿಸಿದ ವಾಹನಗಳ ಸಂಖ್ಯೆ ಎಷ್ಟು?	
	1) ಟಿಎನ್-57: ಕೆ-9129	ವಿ.ವೆಂಕಟೇಶ ತಂದೆ ಪಾರ್ಥಸಾರಥಿ ಮೊದಲಿಯಾರ್, ಡ್ರೈವರ್, ಹೆಚ್-27, ಪ್ಲಾರವ ಹೋಟೆಲ್ ಕೆನಾಯ್, ಚೆನ್ನೈ-30
	2) ಟಿಎನ್-57: ಸಿ-1287	1) ಜಿ.ಮೋಹನ ರಾಫೆಲ್ ಡ್ರೈವರ್, ಪ್ರಷಿನ್ ಹೌಸ್, 'ಒ' ಕಾಕನಾಡು ಕೊಚ್ಚಿನ್, ಎರ್ನಾಕುಲಂ ಜಿಲ್ಲೆ, ಕೇರಳ ರಾಜ್ಯ. 2) ಅಜೀತ್ ಕುಮಾರ್, ಶ್ರೀಧರನ್ ತಂದೆ, ಕ್ಲೀನರ್, ಸಾ: 179, ಡಾ:ಗಿರಿಯಪ್ಪ ರಸ್ತೆ ಟಿ.ನಗರ -ಮದ್ರಾಸ್. 3) ಪಿ.ಮುರಗನ್, ತಂದೆ ಮಾನ್ಸುರಡ್ಡೈ ಸಾ:46 : 2, ಸುಂದರೇಶ್ ನಾಮಿಕೆರೆ, ಸೇಂಬ ಅನ್ನಾನಗರ, ದಿಂದೋಗಲ್.

3) ಜಿ. ಜಿ. 19. ಟಿ. 575	1) ಎ.ರಫೀಕ್‌ಖಾನ್, ತಂದೆ ಮಹಮೂದ್ ಖಾನ್, ಡ್ರೈವರ್, ಸಾ.ಅಜಾದನಗರ ಸೆಂಟ್ರಲ್ ಜೈಲ್ ಹತ್ತಿರ, ಇಂದೂರ ಜಿಲ್ಲೆ, ಮಧ್ಯಪ್ರದೇಶ.
	2)ಸರ್ದಾರಾಜ ಖಾನ್, ತಂದೆ ಅಮ್ರೋಜಿಖಾನ್ ಕ್ಲೀನರ್, ಸಾ: ಚಂದನನಗರ, ಇಂದೂರ ಮಧ್ಯಪ್ರದೇಶ
	3) ಚುನಿಲಾಲ, ತಂದೆ: ಗಂಗಾರಾಮ ಪತ್ರಧಭಜಾಂ, ತಾ: ಸಂಘದ ಜಿಲ್ಲಾ ಸೂರತ್ (ಟ್ಯಾಂಕರ್ ಮಾಲೀಕರು)
4) ಎಂಹೆಚ್: 18: ಡಿ: 7643	ಚಂದನ್‌ಸಿಂಗ್ ರಾಮಸಿಂಗ್, ಸಾ:ಕೃಷ್ಣಸಾಗರ, ಉತ್ತರ ಪ್ರದೇಶ.